**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 999/2022**

| | | | |
|---|---|---|---|
| **ಹೆಸರು** | **:** | **ರಫೀಕ** | |
| **ತಂದೆಯ ಹೆಸರು** | **:** | **ಮಹೆಬೂಬಸಾಬ** | ಪ್ರಾ.ಸಾ. 2 |
| **ವಯಸ್ಸು** | **:** | **45 ವರ್ಷ** | ದಿನಾಂಕಃ 29-07-2024 |
| **ಉದ್ಯೋಗ** | **:** | **ಮುಖ್ಯಪೇದೆ** | |
| **ವಾಸಸ್ಥಳ** | **:** | **ರಟಕಲ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

2020 ರಿಂದ ಇಲ್ಲಿಯವರೆಗೆ ರಟಕಲ ಪೋಲಿಸ ಠಾಣೆಯಲ್ಲಿ ಮುಖ್ಯಪೇದೆಯಾಗಿ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 13-08-2023 ರಂದು ನ್ಯಾಯಾಲಯದ ಆದೇಶದಂತೆ ಬೆಳಿಗ್ಗೆ 10 ರಿಂದ 11 ಗಂಟೆವೆರೆಗೆ ಆರೋಪಿ ಗೊರೆ ಮಹೆಬೂಬ ರವರ ಮನೆಯ ಗೋಡೆ ಮೇಲೆ ಪ್ರೊಕ್ಲಮೇಷನಿನ ಪ್ರತಿಯನ್ನು ಅಂಟಿಸಿದ್ದೇನೆ. ಉಮರ ಕಾಲೋನಿ ಗುಲ್ಬರ್ಗಾದಲ್ಲಿರುವ ಕುಡಿಯುವ ನೀರಿನ ಟ್ಯಾಂಕಿನ ಮೇಲೆ ಸಹ ಸದರಿ ಪ್ರೊಕ್ಲಮೇಷನಿನ ಪ್ರತಿಯನ್ನು ಅಂಟಿಸಿದ್ದೇನೆ. ಅದೇ ದಿನ ಮುಖ್ಯರಸ್ತೆಯ ಪಕ್ಕದಲ್ಲಿರುವ ವಿದ್ಯುತ ಕಂಬಕ್ಕೆ ಸಹ ಪ್ರೊಕ್ಲಮೇಷನಿನ ಪ್ರತಿಯನ್ನು ಅಂಟಿಸಿದ್ದೇನೆ. ಈ ರೀತಿ ಪ್ರೊಕ್ಲಮೇಷನನ್ನು ಇಕ್ಬಾಲಶೇಖ ತಂದೆ ಶಕೀಲ ಹಾಗೂ ಮೊಹ್ಮದ ಅಜೀರುದ್ದೀನ ರವರ ಸಮಕ್ಷಮ ಜಾರಿ ಮಾಡಿದ್ದೇನೆ. ಸಾಕ್ಷಿ ತಾವು ಮಾಡಿರುವ ಪಂಚನಾಮೆಯನ್ನು ನೋಡಿ ಗುರುತಿಸಿ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿ ತಾವು ಸಲ್ಲಿಸಿರುವ ವರದಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

3ನೇ ಆರೋಪಿಯಾದ ಗೋರೆ ಮಹ್ಮದ ತನ್ನ ಮನೆಯ ವಿಳಾಸದಲ್ಲಿ ಇರುವುದಿಲ್ಲ ಮತ್ತು ಕಣ್ಮರೆಯಾಗಿರುತ್ತಾನೆ ಎಂದು ನನಗೆ ಗೊತ್ತಾಗಿರುತ್ತದೆ.

ದಿನಾಂಕಃ 13-12-2023 ರಂದು ನ್ಯಾಯಾಲಯದ ಆದೇಶದಂತೆ ಬೆಳಿಗ್ಗೆ 10 ರಿಂದ 1-30 ಗಂಟೆವೆರೆಗೆ ಆರೋಪಿ ಖಾಲಿದ ರವರ ವಿರುದ್ದ ಅಹ್ಮದನಗರದಲ್ಲಿರುವ ಆಳಂದ ಚೆಕಪೋಸ್ಟ ಹತ್ತಿರ ಮಸೀದ ಗೋಡೆಯ ಮೇಲೆ ಪ್ರೊಕ್ಲಮೇಷನಿನ ಪ್ರತಿಯನ್ನು ಅಂಟಿಸಿದ್ದೇನೆ. ಖಾದ್ರಿ ಚೌಕ ಗುಲ್ಬರ್ಗಾದಲ್ಲಿರುವ ಕುಡಿಯುವ ನೀರಿನ ಟ್ಯಾಂಕಿನ ಮೇಲೆ ಸಹ ಸದರಿ ಪ್ರೊಕ್ಲಮೇಷನಿನ ಪ್ರತಿಯನ್ನು ಅಂಟಿಸಿದ್ದೇನೆ. ಮಹಾನಗರ ಪಾಲಿಕೆ

ಕಲಬುರ್ಗಿ ಕಚೇರಿ ಗೋಡೆಯ ಸಹ ಪ್ರೊಕ್ಲಮೇಷನಿನ ಪ್ರತಿಯನ್ನು ಅಂಟಿಸಿದ್ದೇನೆ. ಈ ರೀತಿ ಪ್ರೊಕ್ಲಮೇಷನನ್ನು ಮಹ್ಮಾದ ಉಸ್ಮಾನ ತಂದೆ ಮಹ್ಮದ ಮಸ್ತಾನ ಮತ್ತು ನಬಿಸಾಬ ತಂದೆ ಇಕ್ಬಾಲ ಪಾಷಾ ರವರ ಸಮಕ್ಷಮ ಜಾರಿ ಮಾಡಿದ್ದೇನೆ. ಸಾಕ್ಷಿ ತಾವು ಮಾಡಿರುವ ಪಂಚನಾಮೆಯನ್ನು ನೋಡಿ ಗುರುತಿಸಿ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿ ತಾವು ಸಲ್ಲಿಸಿರುವ ವರದಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ-7 ಎಂದು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

4ನೇ ಆರೋಪಿಯಾದ ಖಾಲಿದ ತನ್ನ ಮನೆಯ ವಿಳಾಸದಲ್ಲಿ ಇರುವುದಿಲ್ಲ ಮತ್ತು ಕಣ್ಮರೆಯಾಗಿರುತ್ತಾನೆ ಎಂದು ನನಗೆ ಗೊತ್ತಾಗಿರುತ್ತದೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**